**ಸಾಕ್ಷಿಯನ್ನು ದಿಃ 16.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಆರ್.ಹೆಚ್. ವಕೀಲರಿಂದಃ-**

ನಾನು ಪಿ.ಯು.ಸಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ಓದಿ ತಿಳಿದುಕೊಂಡಿದ್ದೇನೆ. ನ್ಯಾಯಾಲಯದಲ್ಲಿ ಸಲ್ಲಿಸುವ ಪೂರ್ವದಲ್ಲಿ ಸಿ.ಡಿ.ಪಿ.ಓ ಕಛೇರಿಗೆ ಅರ್ಜಿ ಸಲ್ಲಿಸಿದ್ದೆ. ವೀಣಾ ಎಂಬುವವರು ಪ್ರೊಟೇಕ್ಷನ್ ಅಪೀಸರ್ ಆಗಿ ಸಿ.ಡಿ.ಪಿ.ಓ ಕಛೇರಿಯಲ್ಲಿ ಇದ್ದು, ಅವರೊಬ್ಬರೇ ನಮಗೆ ಕೌನ್ಸಲಿಂಗ್ ಮಾಡುತ್ತಿದ್ದರು. ವಿಶ್ವನಾಥ, ಜ್ಯೋತಿ ವಿಶ್ವನಾಥ ,ತ್ರಿಭುವನ್, ಭುವನಾ, ಹೆಚ್. ಎಂ. ರಂಗಮಲ್ಲಯ್ಯ, ಟಿ. ಎನ್ ಗಂಗಮ್ಮ, ಅಂಜು ಭವಾನಿ ಭರತ್ ಮತ್ತು ಇತ್ಮಿಯಾಜ್ ಎಂಬುವವರ ಮೇಲೆ ಸಿ.ಡಿ.ಪಿ.ಓ ಕಛೇರಿಯಲ್ಲಿ ಅರ್ಜಿ ಕೊಟ್ಟಿದ್ದೆ. ಭರತ್ ಮತ್ತು ಇತ್ಮಿಯಾಜ್ ರವರು ನಮ್ಮ ಜಾಗದಲ್ಲಿ ಟ್ರೆಸ್ ಪಾಸ್ ಮಾಡುತ್ತಿದ್ದರಿಂದ ಅವರನ್ನೂ ಸೇರಿಸಿ ಅರ್ಜಿ ಕೊಟ್ಟಿದ್ದೆ. ಅವರಿಬ್ಬರೂ ನಮ್ಮ ಕುಟುಂಬದ ಸದಸ್ಯರು ಆಗಿರುವುದಿಲ್ಲ. ಹಾಗೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಮೇಲೆ ಹೇಳಿದವರ ಮೇಲೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸದರಿ ದೂರಿನ ಮೇಲೆ ಪೊಲೀಸರು ಯಾವುದೆ ಕ್ರಮ ಜರುಗಿಸಿಲ್ಲ. ಅದು ಸುಳ್ಳು ದೂರು ಎಂದು ಯಾವುದೆ ಕ್ರಮ ಜರುಗಿಸಿಲ್ಲ ಎಂದರೆ ಸಾಕ್ಷಿ ಆ ರೀತಿ ಏನಿಲ್ಲಾ ಅವರು ಯಾವುದೆ ಕ್ರಮ ತೆಗೆದುಕೊಳ್ಳದ ಕಾರಣ ಸಿ.ಡಿ.ಪಿ.ಓ ಕಛೇರಿಯಲ್ಲಿ ಅರ್ಜಿ ಕೊಟ್ಟಿದ್ದೆ ಎನ್ನುತ್ತಾರೆ.

ಸಿ.ಡಿ.ಪಿ.ಓ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಸಿ.ಡಿ.ಪಿ.ಓ ಕಛೇರಿಯಲ್ಲಿ ನಾನು ಒಟ್ಟು 10 ಜನರ ಮೇಲೆ ಅರ್ಜಿ ಸಲ್ಲಿಸಿದ್ದು, ಮೇಲೆ ಹೇಳಿದ 9 ಜನರ ಜೊತೆಗೆ ಶ್ರುತಿ ತ್ರಿಭುವನ್ ಎಂಬುವವರ ಮೇಲೆ ಅರ್ಜಿ ಸಲ್ಲಸಿದ್ದೆ ಎನ್ನುತ್ತಾರೆ. ಹಾಗೆ ಅರ್ಜಿ ಸಲ್ಲಿಸಿದ ನಂತರ ಸಿ.ಡಿ.ಪಿ.ಓ ಕಛೇರಿಯಲ್ಲಿ ವಿಚಾರಣೆ ಮಾಡಿರುತ್ತಾರೆ. ಸದರಿ ಪ್ರಕರಣ ಅಲ್ಲಿಗೆ ನಿಂತಿತ್ತು. ಪ್ರೋಟೆಕ್ಷನ್ ಅಫೀಸರ್ ಯಾವುದೆ ಕ್ರಮ ತೆಗೆದುಕೊಂಡಿಲ್ಲ ಎಂದು ಮೇಲ್ಮನವಿ ಸಲ್ಲಿಸಿದ್ದಿರಾ ಎಂದರೆ ಸಲ್ಲಿಸಿಲ್ಲ, ಸಾಕ್ಷಿ ಪುನಃ ಅದಕ್ಕಾಗಿ ಈ ಕೇಸ್ ಅನ್ನು ಹಾಕಿದ್ದು ಎನ್ನುತ್ತಾರೆ. ಈ ಕೇಸ್ ನಲ್ಲಿ ವಿಶ್ವನಾಥ ಮತ್ತು ರಂಗಮಲ್ಲಯ್ಯ ರವರ ಮೇಲೆ ಕೇಸ್ ಮಾಡಿರುತ್ತೇನೆ.

ಸಿ.ಡಿ.ಪಿ.ಓ ಕಛೇರಿಯಲ್ಲಿ ಸೇರಿಸಿದ ಎಲ್ಲರನ್ನು ಈ ಕೇಸ್ ನಲ್ಲಿ ಸೇರಿಸಿರುವುದಿಲ್ಲ. ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿರುವ ವಿಷಯಗಳಿಗೆ ನಾನೆ ಮಾಹಿತಿ ಕೊಟ್ಟಿದ್ದು ಅದು ನನಗೆ ಗೊತ್ತಿರುತ್ತದೆ.

ನನಗೆ ಇಬ್ಬರು ಮಕ್ಕಳು. ಮನೆಯಲ್ಲಿ ನಾನು ಮತ್ತು ನನ್ನ ಮಕ್ಕಳು ಇಬ್ಬರು ಮಾತ್ರ ವಾಸ ಇರುತ್ತೇವೆ. ನನ್ನ ಗಂಡ ತೀರಿಕೊಂಡ ನಂತರ ಮತ್ತು ಪೂರ್ವದಲ್ಲಿ ನಮ್ಮ ಮನೆಯಲ್ಲಿ ಯಾರೂ ವಾಸ ಇರಲಿಲ್ಲ ಆದರೆ ಅಮ್ಮ ಮತ್ತು ಅಣ್ಣ ಬಂದು ಹೋಗುತ್ತಿದ್ದರು. ನನ್ನ ತಾಯಿ ಧನಲಕ್ಷ್ಮಿ ನನ್ನ ಜೊತೆ ಇದ್ದು ಅವರಿಗೆ ಮಾನಸಿಕ ಹಿಂಸೆ ಕೊಟ್ಟಿದ್ದರು ಎಂದು ಅರ್ಜಿಯಲ್ಲಿ ನಾನು ಹೇಳಿ ಬರೆಸಿಲ್ಲ. ನನ್ನ ಮಗಳ ವಯಸ್ಸು 38, ಮಗನ ವಯಸ್ಸು 32 ಆಗಿರುತ್ತದೆ. ಹುಣಸೂರು ನ್ಯಾಯಾಲಯದಲ್ಲಿ ನನ್ನ ಮಗ ವಕೀಲರ ವೃತ್ತಿ ಮಾಡುತ್ತಾನೆ ಎಂದರೆ ಸರಿ. ನನ್ನ ಮಗಳು ಗ್ಯಾಸ್ ಎಜನ್ಸಿ ಪ್ರೊಪರೈಟರ್ ಎಂದರೆ ಸರಿ. ನನ್ನ ಮಗಳಿಗೆ ತಿಂಗಳಿಗೆ 1 1/2 ಲಕ್ಷ ಕ್ಕೂ ಮೇಲ್ಪಟ್ಟು ಆದಾಯ ಇದೆ. ನನ್ನ ಮಗ 2 ವರ್ಷದಿಂದ ವಕೀಲರ ವೃತ್ತಿ ಮಾಡುತ್ತಿದ್ದಾನೆ. ಅವರಿಗೆ ಯಾವುದೆ ಅದಾಯ ಇರುವುದಿಲ್ಲ.

ನಾವು ವಾಸವಾಗಿರುವ ಮನೆ ಹಳೆ ಬಿ.ಎಂ. ರೋಡ್, ನೆಲ ಮಹಡಿಯಲ್ಲಿ ಇರುತ್ತದೆ. ಸದರಿ ಮನೆ ಮೂಲತಃ ನನ್ನ ಮಾವನಿಗೆ ಸೇರಿದ್ದು ಎಂದರೆ ಸರಿ. ಅವರು ಜೀವಂತ ಇರುವುವಾಗಲೆ 1977 ರಲ್ಲೆ ನೊಂದಣಿ ಪಾಲು ವಿಭಾಗ ಆಗಿತ್ತು. ನನ್ನ ಮಾವ, ಅತ್ತೆ ಮತ್ತು ಮೂರು ಜನ ಗಂಡು ಮಕ್ಕಳ ನಡುವೆ ಒಟ್ಟು 5 ಜನ ರ ನಡುವೆ ಪಾಲು ವಿಭಾಗ ಆಗಿತ್ತು. ಪಾಲು ಕೊಟ್ಟ ನಂತರ ನೆಲ ಮಹಡಿಯಲ್ಲಿ ನನ್ನ ಗಂಡ ಮಾಲ್ತೇಶ್ , ಅವರ ತಂದೆ, ತಾಯಿ, ಅವರ ಅಣ್ಣ ಎಲ್ಲರೂ ಜೊತೆಯಲ್ಲಿ ಇದ್ದರು. ನೆಲ ಮಹಡಿಗೆ ಹೊಂದಿಕೊಂಡಂತೆ ಇನ್ನೊಂದು ಆರ್.ಸಿ.ಸಿ ಮನೆ ಇದೆ ಎಂದರೆ ಸರಿಯಲ್ಲ. ಒಂದೆ ಮೆಪಾಲು ವಿಭಾಗ ಆಗಿದ್ದು ರಂಗಮಲ್ಲಯ್ಯ ರವರು ಅದೆ ಮನೆಯಲ್ಲೆ ವಾಸ ಇದ್ದರು.

ನನ್ನ ಮದುವೆ ಮಾಲ್ತೇಶ್ ಜೊತೆ 1986 ರಲ್ಲಿ ಆಗಿರುತ್ತದೆ. ಮಾವ ಇದ್ದಾಗ ಅದ ಪಾಲು ವಿಭಾಗ ಹೊರತುಪಡಿಸಿ ಮತ್ತೇ ಯಾವುದೆ ಪಾಲು ವಿಭಾಗ ಆಗಿರುವುದಿಲ್ಲ. ಒಂದು ಬಾರಿ ಪಾಲು ವಿಭಾಗ ಆದ ಬಗ್ಗೆ ನಾನು ಅರ್ಜಿಯಲ್ಲಿ ಹೇಳಿರುತ್ತೇನೆ. ನೆಲಮಹಡಿಯ ಮೇಲೆ ಒಂದು ಓಪನ್ ಓರಾಂಡ ಮತ್ತು ಮೂರು ಬೆಡ್

ರೂಮ್ ಇರುತ್ತದೆ. ಒಂದನೇ ಮಹಡಿಯಲ್ಲಿ ಹೆಚ್. ಎಂ. ವಿಶ್ವನಾಥ 1 ನೇ ಎದುರದಾರರ ವಾಸ ಇರುತ್ತಾರೆ. ಅವರ ಜೊತೆ ಅವರ ಕುಟುಂಬದವರು ವಾಸ ಇರುತ್ತಾರೆ. ಅವರು ಮತ್ತು ಅವರ ಹೆಂಡತಿ ವಾಸ ಇದ್ದಾರೆ. 1 ನೇ ಎದುರುದಾರಿಗೆ ಎದುರುದಾರರು ವಾಸ ಇರುವ ಮನೆ ಪಾಲು ವಿಭಾಗದಲ್ಲಿ ಅವರ ಪಾಲಿಗೆ ಬಂದಂತಹ ಮನೆ ಎಂದರೆ ಸರಿ. ಎಷ್ಟು ವರ್ಷದಿಂದ ಬೇರೆ ಬೇರೆ ಇದ್ದಿರಿ ಎಂದರೆ ನಾನು ಮದುವೆ ಆದಾಗಿನಿಂದ ಬೇರೆ ಬೇರೆ ಇದ್ದೇವೆ ಎನ್ನುತ್ತಾರೆ. ಬಿ. ಎಂ. ರಸ್ತೆಯಿಂದ ಬರುವಾಗ ನಮ್ಮ ಮನೆಗೆ ಪ್ರತ್ಯೇಕ ಪ್ರವೇಶದ್ವಾರ ಇದೆ ಎಂದರೆ ಸರಿ. ಸದರಿ ದ್ವಾರದಿಂದ ನಾವು, ನಮ್ಮ ಕುಟುಂಬದವರು, ಸ್ನೇಹಿತರು ಓಡಾಡುತ್ತೇವೆ. ಬಿ.ಎಂ. ರೋಡ್ ದಿಂದ 1 ನೇ ಎದುರುದಾರರ ಮನೆಗೆ ಪ್ರತ್ಯೇಕ ಪ್ರವೇಶ ಇರುತ್ತದೆ. ಅವರ ಮನೆಗೆ ಬೇರೆ ಅಡುಗೆ ಮನೆ, ನಮ್ಮ ಮನೆಗೆ ಬೇರೆ ಅಡುಗೆ ಮನೆ ಇರುತ್ತದೆ ಎಂದರೆ ಸರಿ.

ನೊಂದಣಿ ಪಾಲುಪಾರಿಕತ್ ಆದನಂತರ ನಮ್ಮ ಕುಟುಂಬದಲ್ಲಿ ಒಟ್ಟು ಕುಟುಂಬದ ಆಸ್ತಿ ಇರಲಿಲ್ಲ ಎಂದರೆ ಸರಿ. ಏನಿದ್ದರೂ ರಕ್ತ ಸಂಬಂಧ ಮಾತ್ರ ಉಳಿದುಕೊಂಡಿತ್ತು ಎಂದರೆ ಸರಿ. ನನ್ನ ಗಂಡ ಬುದುಕಿದ್ದಾಗ ಯಾವುದಲ್ಲಾ ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಬದುಕಿದ್ದಾಗ ಇದೆ ನ್ಯಾಯಾಲಯದಲ್ಲಿ ಹಲವು ಕ್ರಿಮಿನಲ್ ಪ್ರಕರಣಗಳು ಇದ್ದವು ಎಂದರೆ ಇದ್ದಿರಬಹುದು ಎನ್ನುತ್ತಾರೆ. ನನ್ನ ತಾಯಿ ಧನಲಕ್ಷ್ಮಿರವರ ಮೇಲೂ ಹುಣಸೂರು ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣಗಳು ಇದೆ ಎಂದರೆ ಸರಿ. ಸಾಕ್ಷಿ ಪುನಃ ಅದರ ಮೇಲೆ ಅಪಿಲು ಹೋಗಿದ್ದೇವು ಎನ್ನುತ್ತಾರೆ. ನನ್ನ ಮೇಲೂ ಸಹ ಹುಣಸೂರು ಪೊಲೀಸ್ ಪಟ್ಟಣ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ. ಹುಣಸೂರು ಪಟ್ಟಣ ಪೊಲೀಸ್ ಠಾಣೆಯವರು ಎಷ್ಟು ಬಾರಿ ನಿಮ್ಮನ್ನು ವಿಚಾರಣೆಗಾಗಿ ಕರೆಸಿದ್ದರು ಎಂದರೆ ಸಾಕ್ಷಿ ನನ್ನನ್ನು ಕರೆಸಿಲ್ಲ ಎನ್ನುತ್ತಾರೆ.

ಹುಣಸೂರು ಪಟ್ಟಣ ಪೊಲೀಸ್ ಠಾಣೆಯವರು ನನ್ನನ್ನು ಕರೆಸಿದ್ದರೊ ಇಲ್ಲವೊ ಎಂಬುವದರ ಬಗ್ಗೆ ಅರ್ಜಿಯಲ್ಲಿ ನಮೂದಿಸಿದ್ದಿರಾ ಎಂದರೆ ಸಾಕ್ಷಿ ಒಂದು ಬಾರಿ ಠಾಣೆಗೆ ಕರೆಸಿದ್ದರು ಎನ್ನುತ್ತಾರೆ. 1 ನೇ ಎದುರುದಾರರು ನೀಡಿದ ದೂರಿನ ಮೇಲೆ 2-3 ಬಾರಿ ಪೊಲೀಸರು ನನ್ನನ್ನು ವಿಚಾರಣೆಗಾಗಿ ಕರೆಸಿದ್ದರು. ಹಾಗೆ ಕರೆಸಿದಾಗ ನನ್ನ ಮೇಲೆ ಏನು ಆರೋಪ ಇತ್ತು ಎಂದು ನಾನು ತಿಳಿದುಕೊಂಡಿದ್ದೆ. 1 ನೇ ಎದುರುದಾರರು ಯುಗಾದಿ ಹಬ್ಬದ ದಿನ ಅಂದರೆ 2018 ರಲ್ಲಿ ಗಲಾಟೆ ಆಗಿದ ಬಗ್ಗೆ ದೂರು

ಕೊಟ್ಟಿದ್ದರು. 2019 ರಲ್ಲಿ 2 ನೇ ಬಾರಿ 1 ನೇ ಎದುರುದಾರರು ದೂರು ಕೊಟ್ಟಿದ್ದರು. ಜಾಗವನ್ನು ಸ್ವಚ್ಛ ಮಾಡಿ ಬಾಡಿಗೆಗೆ ಕೊಟ್ಟು ಬಿಡುತ್ತೇನೆ ಎಂದು ನನ್ನ ಮೇಲೆ 2 ನೇ ಬಾರಿ ದೂರು ಕೊಟ್ಟಿದ್ದರು. 2019 ರ ಸೆಪ್ಟಂಬರ್ ತಿಂಗಳಲ್ಲಿ 3 ನೇ ಬಾರಿ ದೂರು ಕೊಟ್ಟಿದ್ದರು. ಭರತ್ ಮತ್ತು ಇತ್ಮಿಯಾಜ್ ರವರ ಕೈಯಲ್ಲಿ ಅಗ್ರಿಮೆಂಟ್ ಮಾಡಿಕೊಟ್ಟಿರುತ್ತಾರೆ ಎಂದು ದೂರು ಆಗಿತ್ತು. ಅದಾದ ಮೇಲೆ ಎಷ್ಟು ಬಾರಿ ದೂರು ಕೊಟ್ಟಿದ್ದರು ಎಂದರೆ ಅವರು ಕೊಡುತ್ತಾನೆ ಇರುತ್ತಾರೆ ಎನ್ನುತ್ತಾರೆ. ಠಾಣೆಗೆ ಹೋದಾಗ ಮುಚ್ಚಳಿಕೆ ಬರೆಸಿ ಕಳುಹಿಸಿದ್ದರು ಎಂದರೆ ಸರಿ. ಇದೆಲ್ಲಾ ಸಂಗತಿಗಳು ನಡೆದ ನಂತರ ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ದಾಖಲಿಸಿದ್ದೇನೆ ಎಂದರೆ ಸರಿ.

ಅರ್ಜಿಯಲ್ಲಿ ಸಲ್ಲಿಸಿರುವ ವಿಚಾರದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟು ಬಗೆಹರಿಸಿಕೊಳ್ಳಬಹುದಿತ್ತು ಮತ್ತೊಂದನ್ನು ಸಿವಿಲ್ ದಾವೆ ಹೂಡಿ ಬಗೆಹರಿಸಿಕೊಳ್ಳಬಹುದಿತ್ತು ಎಂದರೆ ಸಾಕ್ಷಿ ಅದು ಹೇಗೆ ಆಗುತ್ತದೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ನಾನು ನೀಡಿದ ದೂರು ಸುಳ್ಳು ಎಂದು ಪೊಲೀಸರು ಹೇಳಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಾಲಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.